**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ನಂಜನಗೂಡು**

**ಸಿ.ಸಿ. ನಂ.71/2018**

ಪಿರ್ಯಾದಿದಾರರು : ಕವಲಂದೆ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರುಃ 1 ರಾಜಪ್ಪ ಬಿನ್ ಗುರುಮಲ್ಲಪ್ಪ 32 ವರ್ಷ
ವಾಸಃ ಹನುಮನಪುರ ಗ್ರಾಮ, ನಂಜನಗೂಡು ತಾಲ್ಲೂಕು

2 ಮಂಜುನಾಥ ಬಿನ್ ಸಿದ್ದರಮನಾಯಕ 41 ವರ್ಷ
ವಾಸಃ ಹೆಡತಲೆ ಗ್ರಾಮ, ನಂಜನಗೂಡು ತಾಲ್ಲೂಕು

**::ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿತರ ಹೇಳಿಕೆ::**

ಪ್ರಶ್ನೆ 1- ಈ ಪ್ರಕರಣದಲ್ಲಿಯ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿಸಿಕೊಂಡಿದ್ದೀರಾ?

**1 ನೇ ಆರೋಪಿ ಉತ್ತರ–**

**2 ನೇ ಆರೋಪಿ ಉತ್ತರ-**

ಪ್ರಶ್ನೆ 2-ಪ್ರಾಸಾ-2-ಶಿವಮಾದಯ್ಯ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 16.03.2017 ರಂದು ಚುನಾವಣಾ ಸಂಬಂಧ ಮೇಲಾಧಿಕಾರಿಗಳ ಆದೇಶದ ಮೇರೆಗೆ ಠಾಣಾ ವ್ಯಾಪ್ತಿಯಲ್ಲಿ ಗಸ್ತಿನಲ್ಲಿ ಇದ್ದಾಗ ಹೆಡತಲೆ ಗ್ರಾಮದಲ್ಲಿ ಇರುವ ಎಂ.ಎಸ್.ಐ.ಎಲ್. ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎನ್ನುವ ಮಾಹಿತಿ ಬಂದ ಮೇರೆಗೆ ಪಂಚರಾದ ಚಾಸಾ-2 ಮತ್ತು 3 ರವರನ್ನು ಠಾಣೆಗೆ ಬರಮಾಡಿಕೊಂಡು ಈ ವಿಷಯವನ್ನು ತಿಳಿಸಿ ಅವರು ಪಂಚರಾಗಲು ಒಪ್ಪಿಕೊಂಡ ಮೇರೆಗೆ ತಮ್ಮ ಸಿಬ್ಬಂದಿಯಾದ ಚಾಸಾ-6 ರಿಂದ 8 ರವರನ್ನು ಕರೆದುಕೊಂಡು ಇಲಾಖಾ ಜೀಪ್ ಸಂಖ್ಯೆ ಕೆಎ-55-ಜಿ-10 ರಲ್ಲಿ ರಾತ್ರಿ 9.15 ಗಂಟೆಗೆ ಠಾಣೆಯಿಂದ ಹೊರಟು 9.45 ಗಂಟೆಗೆ ಘಟನಾ ಸ್ಥಳ ತಲುಪಿ ಹೆಡತಲೆ ಗ್ರಾಮದ ಎಂ.ಎಸ್.ಐ.ಎಲ್. ಅಂಗಡಿಗೆ ಹೊಂದಿಕೊಂಡಿರುವ ಇಬ್ಬರು ಆಸಾಮಿಗಳು ಆಚೆ ಬಂದಾಗ ಅವರುಗಳನ್ನು ಸಿಬ್ಬಂದಿ ಸಹಾಯದಿಂದ ಹಿಡಿದುಕೊಂಡಾಗ ಇತರೆ 4-5 ಜನ ವ್ಯಕ್ತಿಗಳು ಓಡಿ ಹೋಗಿರುತ್ತಾರೆ. ಸದರಿ ಅಂಗಡಿ ಮಳಿಗೆಯನ್ನು ಪರಿಶೀಲಿಸಿದಾಗ ಅಂಗಡಿಯ ಮೂಲೆಯಲ್ಲಿ ಒಂದು

ರಟ್ಟಿನ ಡಬ್ಬವಿದ್ದು ಅದರಲ್ಲಿ original choice ವಿಸ್ಕಿಯ 90 ಎಂ.ಎಲ್. ನ 42 ಪೌಚುಗಳು ಇದ್ದು ಅದರ ಪಕ್ಕದಲ್ಲಿ ಪ್ಲಾಸ್ಟಿಕ್ ಲೋಟ ಮತ್ತು ನೀರಿನ ಜಗ್ ಇಟ್ಟಿದ್ದರು. ಆ ಇಬ್ಬರು ವ್ಯಕ್ತಿಗಳಿಗೆ ಲೈಸನ್ಸ್ ಇದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿರುತ್ತಾರೆ. ಅಕ್ರಮವಾಗಿ ಹಣ ಗಳಿಸುವ ಉದ್ದೇಶದಿಂದ ಅವುಗಳನ್ನು ಮಾರಾಟ ಮಾಡುತ್ತಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಆರೋಪಿತರನ್ನು ಅವರ ಹೆಸರು ಮತ್ತು ವಿಳಾಸ ಕೇಳಿದಾಗ ಅವರುಗಳು ತಮ್ಮ ಹೆಸರು ರಾಜಪ್ಪ ಬಿನ್ ಗುರುಮಲ್ಲಪ್ಪ, ಹನುಮನಪುರ ಮತ್ತು ಮಂಜುನಾಥ ಬಿನ್ ಸಿದ್ದರಾಮನಾಯ್ಕ , ಹೆಡತಲೆ ಎಂದು ತಿಳಿಸಿದರು. ನಂತರ ಪಂಚರ ಸಮಕ್ಷಮ 10 ಪ್ಲಾಸ್ಟಿಕ್ ಲೋಟ, 2 ಲೀಟರ್ ಸಾಮರ್ಥದ 4 ನೀರಿನ ಬಾಟಲ್ , 2 ಪ್ಲಾಸ್ಟಿಕ್ ಜಗ್ ಗಳು, ರಟ್ಟಿನ ಡಬ್ಬದಲ್ಲಿ ಇದ್ದ 5 ಖಾಲಿ ಟೆಟ್ರಾ ಪ್ಯಾಕೆಟ್ ಗಳು ಮತ್ತು original choice ವಿಸ್ಕಿಯ 90 ಎಂ.ಎಲ್. ನ 42 ಪೌಚುಗಳನ್ನು ರಾತ್ರಿ 10.00 ರಿಂದ 10.45 ರ ವರೆಗೆ ಪಂಚನಾಮೆ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತೇವೆ. 42 ಪೌಚುಗಳ ಪೈಕಿ 28 ಪೌಚುಗಳನ್ನು ರಾಸಯನಿಕ ಪರೀಕ್ಷೆಗೆ ಆರ್. ಎಂಬ ಅಕ್ಷರದಿಂದ ಸೀಲು ಮಾಡಿ ಪ್ರತ್ಯೇಕವಾಗಿ ತೆಗೆದಿರಿಸಲಾಗಿರುತ್ತದೆ. ನಂತರ ವಶಕ್ಕೆ ಪಡೆದ ಆರೋಪಿತರು, ಮುದ್ದೆಮಾಲು ಮತ್ತು ಪಂಚನಾಮೆಯೊಂದಿಗೆ ಠಾಣೆಗೆ ಹಿಂದಿರುಗಿ ಸರ್ಕಾರದ ಪರವಾಗಿ ಆರೋಪಿತರ ವಿರುದ್ಧ ಸ್ವ-ಪಿರ್ಯಾದನ್ನು ಚಾಸಾ-9 ರವರಿಗೆ ನೀಡಿರುತ್ತೇನೆ. ದಿನಾಂಕ 17.03.2017 ರಂದು ಸಾಕ್ಷಿದಾರರಾದ ಚಾಸಾ-2, 3, 6 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 18.05.2017 ರಂದು ವಶಪಡಿಸಿಕೊಂಡ 28 ಮದ್ಯದ ಪೌಚುಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ನಮ್ಮ ಠಾಣೆಯ ಶ್ರೀ ಮಹೇಶ್ ಪಿ.ಸಿ.192 ರವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ 26.08.2017 ರಂದು ರಾಸಾಯನಿಕ ವಿಶ್ಲೇಷಣಾ ವರದಿಯನ್ನು DYSP ಕಛೇರಿಯಿಂದ ಸ್ವೀಕರಿಸಿರುತ್ತೇನೆ. ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

1 ನೇ ಆರೋಪಿ ಉತ್ತರ–

**2 ನೇ ಆರೋಪಿ ಉತ್ತರ-**

ಪ್ರಶ್ನೆ-3- ಪ್ರಾಸಾ.3 -ಶಿವಕುಮಾರ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 16.03.2017 ರಂದು ತಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ.1 ರವರಿಗೆ ಮೇಲಾಧಿಕಾರಿಗಳು ಮೌಖಿಕ ಆದೇಶ ನೀಡಿದ ಮೇರೆಗೆ ಹೆಡತಲೆ ಗ್ರಾಮದಲ್ಲಿ ಇರುವ ಎಂ.ಎಸ್.ಐ.ಎಲ್. ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎನ್ನುವ ಮಾಹಿತಿ ಬಂದ ಮೇರೆಗೆ ಪಂಚರಾದ ಚಾಸಾ–2 ಮತ್ತು 3 ರವರನ್ನು ಠಾಣೆಗೆ ಬರಮಾಡಿಕೊಂಡು ಈ ವಿಷಯವನ್ನು ತಿಳಿಸಿ ಅವರು ಪಂಚರಾಗಲು ಒಪ್ಪಿಕೊಂಡ ಮೇರೆಗೆ ತಮ್ಮ ಠಾಣಾ ಸಿಬ್ಬಂದಿಯಾದ ತಾನು, ಚಾಸಾ 1, ಚಾಸಾ–6 ಮತ್ತು 8 ರವರು ಇಲಾಖಾ ಜೀಪ್ ಸಂಖ್ಯೆ ಕೆಎ–55–ಜಿ–10 ರಲ್ಲಿ ರಾತ್ರಿ 9.30 ಗಂಟೆಗೆ ಠಾಣೆಯಿಂದ ಹೊರಟು 9.45 ಗಂಟೆಗೆ ಘಟನಾ ಸ್ಥಳ ತಲುಪಿ ಹೆಡತಲೆ ಗ್ರಾಮದ ಎಂ.ಎಸ್.ಐ.ಎಲ್. ಅಂಗಡಿಗೆ ಹೊಂದಿಕೊಂಡಿರುವ ಒಂದು ಮಳಿಗೆ ಬಳಿ ಸುಮಾರು ಜನಗಳು ಇದ್ದು ಇಬ್ಬರು ಆಸಾಮಿಗಳು ಆಚೆ ಬಂದಾಗ ಅವರುಗಳನ್ನು ಸಿಬ್ಬಂದಿ ಸಹಾಯದಿಂದ ಹಿಡಿದುಕೊಂಡಾಗ ಇತರೆ 4–5 ಜನ ವ್ಯಕ್ತಿಗಳು ಓಡಿ ಹೋಗಿರುತ್ತಾರೆ. ಸದರಿ ಅಂಗಡಿ ಮಳಿಗೆಯನ್ನು ಪರಿಶೀಲಿಸಿದಾಗ ಅಂಗಡಿಯ ಮೂಲೆಯಲ್ಲಿ ಒಂದು ರಟ್ಟಿನ ಡಬ್ಬವಿದ್ದು ಅದರಲ್ಲಿ original choice ವಿಸ್ಕಿಯ 90 ಎಂ.ಎಲ್. ನ 42 ಪೌಚುಗಳು ಇದ್ದು ಅದರ ಪಕ್ಕದಲ್ಲಿ ಪ್ಲಾಸ್ಟಿಕ್ ಲೋಟ ಮತ್ತು ನೀರಿನ ಬಾಟಲ್ ಗಳು ಇಟ್ಟಿದ್ದರು. ಆ ಇಬ್ಬರು ವ್ಯಕ್ತಿಗಳಿಗೆ ಲೈಸನ್ಸ್ ಇದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿರುತ್ತಾರೆ. ಅಕ್ರಮವಾಗಿ ಹಣ ಗಳಿಸುವ ಉದ್ದೇಶದಿಂದ ಅವುಗಳನ್ನು ಮಾರಾಟ ಮಾಡುತ್ತಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಆರೋಪಿತರನ್ನು ಅವರ ಹೆಸರು ಮತ್ತು ವಿಳಾಸ ಕೇಳಿದಾಗ ಅವರುಗಳು ತಮ್ಮ ಹೆಸರು ರಾಜಪ್ಪ ಬಿನ್ ಗುರುಮಲ್ಲಪ್ಪ, ಹನುಮನಪುರ ಮತ್ತು ಮಂಜುನಾಥ ಬಿನ್ ಸಿದ್ದರಾಮನಾಯ್ಕ, ಹೆಡತಲೆ ಎಂದು ತಿಳಿಸಿದರು. 42 ಪೌಚುಗಳ ಪೈಕಿ 28 ಪೌಚುಗಳನ್ನು ರಾಸಾಯನಿಕ ಪರೀಕ್ಷೆಗೆ ಆರ್. ಎಂಬ ಅಕ್ಷರದಿಂದ ಸೀಲು ಮಾಡಿ ಪ್ರತ್ಯೇಕವಾಗಿ ತೆಗೆದಿರಿಸಲಾಗಿರುತ್ತದೆ. ಪಂಚರ ಸಮಕ್ಷಮ 10 ಪ್ಲಾಸ್ಟಿಕ್ ಲೋಟ, 2 ಲೀಟರ್ ಸಾಮರ್ಥದ 4 ನೀರಿನ ಬಾಟಲ್, 2 ಪ್ಲಾಸ್ಟಿಕ್ ಜಗ್ ಗಳು, ರಟ್ಟಿನ ಡಬ್ಬದಲ್ಲಿ

ಇದ್ದ 5 ಖಾಲಿ ಟೆಟ್ರಾ ಪ್ಯಾಕೆಟ್ ಗಳು ಮತ್ತು original choice ವಿಸ್ಕಿಯ 90 ಎಂ.ಎಲ್. ನ 42 ಪೌಚುಗಳನ್ನು ರಾತ್ರಿ 10.00 ರಿಂದ 10.45 ರ ವರೆಗೆ ಪಂಚನಾಮೆ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

1 ನೇ ಆರೋಪಿ ಉತ್ತರ–

2 ನೇ ಆರೋಪಿ ಉತ್ತರ–

ಪ್ರಶ್ನೆ 4–ಫ್ರಾಸಾ–4–ಮಾದೇಗೌಡ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 16.03.2017 ರಂದು ರಾತ್ರಿ 11.00 ಗಂಟೆಗೆ ತಾನು ಠಾಣಾ ಉಸ್ತುವಾರಿಯಲ್ಲಿರುವಾಗ ಚಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ವರದಿಯನ್ನು ಹೊಂದಿಕೊಂಡು ಠಾಣಾ ಮೊಕದ್ದಮೆ ಸಂಖ್ಯೆ 43/2017 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವ ವನ್ನು ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ಹಾಗೂ ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಚಾಸಾ.1 ರವರು ಹಾಜರುಪಡಿಸಿದ ಮಾಲುಗಳನ್ನು ಠಾಣಾ ಪಿ.ಎಫ್. ಸಂಖ್ಯೆ 29/2017 ರಂತೆ ದಾಖಲಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

1 ನೇ ಆರೋಪಿ ಉತ್ತರ–

**2 ನೇ ಆರೋಪಿ ಉತ್ತರ-**

ಪ್ರಶ್ನೆ5-ಈ ಪ್ರಕರಣದಲ್ಲಿ ತಾವೇನಾದರೂ ಹೇಳಲಿಕ್ಕೆ ಇದೆಯೇ?

1 ನೇ ಆರೋಪಿ ಉತ್ತರ–

**2 ನೇ ಆರೋಪಿ ಉತ್ತರ-**

ಪ್ರಶ್ನೆ-6- ತಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸುವುದಕ್ಕೆ ಇದೆಯೇ?

1 ನೇ ಆರೋಪಿ ಉತ್ತರ–

**2 ನೇ ಆರೋಪಿ ಉತ್ತರ-**

(ಆರೋಪಿತರಿಗೆ ಹೇಳಿಕೆಯನ್ನು ಅವರಿಗೆ ತಿಳಿಯುವ ಹಾಗೆ ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ಅದನ್ನು ತಿಳಿದುಕೊಂಡು ನಂತರ ಅವರು ಕೊಟ್ಟ ಉತ್ತರವನ್ನು ನಮೂದಿಸಿಕೊಳ್ಳಲಾಯಿತು)

ದಿನಾಂಕ:15.04.2026

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು